ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ

ಸಂಖ್ಯೆ: ಡಿಟಿಇ/30/ಇಎಸ್‌ಟಿ(1)ಎ/2016, ಭಾಗ /61

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001.
ದಿನಾಂಕ: 10-04-2017.

## ಹಿಂಬರಹ

ಸರ್ಕಾರದ ಆದೇಶ ಸಂಖ್ಯೆ: ಇಡಿ 497 ಯುಆರ್‌ಸಿ 2016, ದಿನಾಂಕ: 7-4-2014 ಹಾಗೂ ತಿದ್ದುಪಡಿ ಕ್ರಮಾಂಕ ಸಂಖ್ಯೆ: ಇಡಿ 497 ಯುಆರ್‌ಸಿ 2016, ದಿ: 10.04.2017 ರಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶನಾಲಯದಲ್ಲಿ ನಿಯೋಜನೆ ಮೇಲೆ ಗ್ರೂಪ್-ಬಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವಿ.ಆರ್.ಬಡಿಗೇರ, ಸಹಾಯಕ ನಿರ್ದೇಶಕರು (ಚಿತ್ರಕಲಾ ಘಟಕ), ಇವರ ನಿಯೋಜನೆಯನ್ನು ಹುದ್ದೆ ಸಮೇತ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿ, ಸದರಿಯವರ ಮೂಲ ಹುದ್ದೆಯಾದ ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರು, ಸರ್ಕಾರಿ ಚಿತ್ರಕಲಾ ಶಾಲೆ, ಧಾರವಾಡ, ಇಲ್ಲಿಗೆ ಹಿಂದಿರುಗಿಸಿ ಆದೇಶಿಸಲಾಗಿದೆ. ಸದರಿ ಸರ್ಕಾರದ ಆದೇಶವನ್ನು ಸಂಬಂಧಪಟ್ಟವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ಶ್ರೀ ವಿ.ಆರ್.ಬಡಿಗೇರ, ಇವರನ್ನು ನಿರ್ದೇಶನಾಲಯದ ನಿಯೋಜನೆಯಿಂದ ಬಿಡುಗಡೆಗೊಳಿಸಿ ಆದೇಶಿಸಿದೆ.

ನಿರ್ದೇಶಕರು

**ಇವರಿಗೆ:-**

ಶ್ರೀ ವಿ.ಆರ್.ಬಡಿಗೇರ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು, ಇವರಿಗೆ ಸರ್ಕಾರಿ ಚಿತ್ರಕಲಾ ಶಾಲೆ, ಧಾರವಾಡ, ಇಲ್ಲಿಗೆ ಸರ್ಕಾರದ ಆದೇಶ ದಿನಾಂಕ: 7/10.04.2017 ರಂತೆ ಕಾರ್ಯವರದಿ ಮಾಡಿಕೊಳ್ಳಲು ಸೂಚಿಸಿದೆ.

**ಪ್ರತಿಗಳು:-**

1. ಮಹಾಲೇಖಪಾಲರು (ಎ&ಇ, ಲೆಕ್ಕ ಪರಿಶೋಧನೆ-1, ಲೆಕ್ಕ ಪರಿಶೋಧನೆ-2) ಕರ್ನಾಟಕ, ಬೆಂಗಳೂರು;
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು;
3. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು;
4. ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ;
5. ಪ್ರಾಂಶುಪಾಲರು, ಧಾರವಾಡ ಚಿತ್ರಕಲಾ ಮಹಾವಿದ್ಯಾಲಯ, ಧಾರವಾಡ;
6. ಮಾನ್ಯ ಉನ್ನತ ಶಿಕ್ಷಣ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು;
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು;
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-8, ವಿಧಾನಸೌಧ;
10. ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು;
11. ನಿರ್ದೇಶಕರ ಆಪ್ತ ಶಾಖೆಗೆ;
12. ಕಛೇರಿ ಪ್ರತಿ.

PR-06
10/4/17

C-589

ಕರ್ನಾಟಕ ಸರ್ಕಾರ

ಕ್ರಮಾಂಕ: ಇಡಿ 497 ಯುಆರ್‌ಸಿ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 10-4-2017

## ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ: ಇಡಿ 497 ಯುಆರ್‌ಸಿ 2016, ದಿನಾಂಕ:7-4-2014 ರಲ್ಲಿ **"ಸರ್ಕಾರಿ ಆದೇಶ ಸಂಖ್ಯೆ:ಇಡಿ 497 ಯುಆರ್‌ಸಿ 2016, ಬೆಂಗಳೂರು ದಿನಾಂಕ:7-4-2014"** ಎಂದು ನಮೂದಾಗಿರುವುದನ್ನು **"ಸರ್ಕಾರಿ ಆದೇಶ ಸಂಖ್ಯೆ:ಇಡಿ 497 ಯುಆರ್‌ಸಿ 2016, ಬೆಂಗಳೂರು ದಿನಾಂಕ:7-4-2017"** ಎಂದು ತಿದ್ದಿ ಓದಿಕೊಳ್ಳತಕ್ಕದ್ದು. ಉಳಿದಂತೆ ಇತರೆ ಯಾವುದೇ ಬದಲಾವಣೆಗಳಿರುವುದಿಲ್ಲ.

JD(Adm)/AD(Adm)/ESK1 A
Fine Arts

ಕರ್ನಾಟಕದ ರಾಜ್ಯಪಾಲರ ಆಜ್ಞಾನುಸಾರ
**ಮತ್ತು ಅವರ ಹೆಸರಿನಲ್ಲಿ,**

(ಎಂ.ಎ.ಅಹಮದ್ ಜಾನ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-2)

10/4/17

**ಪ್ರತಿಗಳು**

1. ಮಹಾಲೇಖಪಾಲರು, (ಲೆಕ್ಕಪತ್ರ/ಆಡಿಟ್), ಕರ್ನಾಟಕ, ಬೆಂಗಳೂರು-560001.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳುರು
3. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳುರು
4. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಪ್ರಾಂಶುಪಾಲರು, ಧಾರವಾಡ ಚಿತ್ರಕಲಾ ಮಹಾವಿದ್ಯಾಲಯ, ಧಾರವಾಡ.
7. ಮಾನ್ಯ ಉನ್ನತ ಶಿಕ್ಷಣ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-8, ವಿಧಾನಸೌಧ.
11. ಶ್ರೀ ವಿ.ಆರ್ ಬಡಿಗೇರ, ಸಹಾಯಕ ನಿರ್ದೇಶಕರು (ಚಿತ್ರಕಲಾ ಘಟಕ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ.
13. ಆಂತರಿಕ ಆರ್ಥಿಕ ಸಲಹೆಗಾರರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ.
14. ರಕ್ಷಣಾ ಕಡತ/ಹೆಚ್ಚುವರಿ ಪ್ರತಿ.

75-32
10/4/17

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ತಾಂತ್ರಿಕ ಶಿಕ್ಷಣ ಇಲಾಖೆಯ ಚಿತ್ರಕಲಾ ಘಟಕದ ಸಹಾಯಕ ನಿರ್ದೇಶಕರಾದ ಶ್ರೀ ವಿ.ಆರ್ ಬಡೀಗೇರ ಇವರನ್ನು ಮೂಲ ಹುದ್ದೆಗೆ ಹಿಂದಿರುಗಿಸುವ ಕುರಿತು.

ಓದಲಾಗಿದೆ:- 1) ಸರ್ಕಾರದ ಆದೇಶ ಸಂಖ್ಯೆ: ಇಡಿ 75 ಯುಆರ್‌ಸಿ 2014, ದಿ:26-07-2014.

2) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಇವರ ಪತ್ರ ಸಂಖ್ಯೆ: ಡಿಟಿಇ/30/ಇಎಸ್‌ಟಿ(1)ಎ/2016/3936, ದಿನಾಂಕ 21-12-2016.

---

ಪ್ರಸ್ತಾವನೆ:-

ಶ್ರೀ ವಿ.ಆರ್ ಬಡಿಗೇರ, ಇವರು ಕಾರ್ಯನಿರ್ವಹಿಸುತ್ತಿದ್ದ ಗ್ರೂಪ್ 'ಸಿ' ವೃಂದದ ಹುದ್ದೆಯನ್ನು ಮೇಲೆ ಓದಲಾದ (1)ರ ಆದೇಶದಲ್ಲಿ ಸಹಾಯಕ ನಿರ್ದೇಶಕರು (ಚಿತ್ರಕಲಾ ಘಟಕ) ಎಂದು ಉನ್ನತೀಕರಿಸಿ ಗ್ರೂಪ್ 'ಬಿ' ಹುದ್ದೆಯೆಂದು ಪದನಾಮೀಕರಿಸಿ ಅವರ ಸ್ವಂತ ವೇತನದಲ್ಲಿಯೇ ಆಡಳಿತದ ಹಿತದೃಷ್ಟಿಯಿಂದ ಉನ್ನತೀಕರಿಸಿದ ಹುದ್ದೆಯಲ್ಲಿಯೇ ಮುಂದುವರೆಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು. ಶ್ರೀ ವಿ.ಆರ್ ಬಡಿಗೇರ, ಇವರು ಮೂಲತಹ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕರೇ ಹೊರತು ಉಪನ್ಯಾಸಕರಲ್ಲ. ಈ ಹುದ್ದೆಯು ಗ್ರೂಪ್ 'ಸಿ' ವೃಂದಕ್ಕೆ ಸೇರಿದ್ದು, ನಿರ್ದೇಶನಾಲಯದಲ್ಲಿ ಯಾವುದೇ ಸಹಾಯಕ ನಿರ್ದೇಶಕರ ಹುದ್ದೆ ಮಂಜೂರಾಗಿರುವುದಿಲ್ಲ. ಆದ್ದರಿಂದ ಸದರಿಯವರನ್ನು ಸ್ವಂತ ವೇತನದ ಮೇಲೆ ಗ್ರೂಪ್ 'ಬಿ' ವೃಂದದ ಸಹಾಯಕ ನಿರ್ದೇಶಕರು(ಚಿತ್ರಕಲಾ ಘಟಕ) ಎಂದು ಪದನಾಮೀಕರಿಸಿರುವ ದಿನಾಂಕ 26-07-2014ರ ಸರ್ಕಾರದ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದು ಹುದ್ದೆಯ ಸಮೇತ ಸದರಿಯವರ ಮೂಲ ಹುದ್ದೆಯಾದ ಸರ್ಕಾರಿ ಚಿತ್ರಕಲಾ ಶಾಲೆ, ಧಾರವಾಡ, ಇಲ್ಲಿನ ಪ್ರೌಢ ಶಾಲಾ ಚಿತ್ರಕಲಾ ಶಿಕ್ಷಕರ ಹುದ್ದೆಗೆ ವರ್ಗಾಯಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 497 ಯುಆರ್‌ಸಿ 2016, ಬೆಂಗಳೂರು ದಿನಾಂಕ: 7-4-2014**

ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶನಾಲಯದಲ್ಲಿ ನಿಯೋಜನೆ ಮೇಲೆ ಗ್ರೂಪ್-ಬಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವಿ.ಆರ್ ಬಡಿಗೇರ, ಸಹಾಯಕ ನಿರ್ದೇಶಕರು (ಚಿತ್ರಕಲಾ ಘಟಕ), ಇವರ ನಿಯೋಜನೆಯನ್ನು ಹುದ್ದೆ ಸಮೇತ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿ, ಸದರಿಯವರ ಮೂಲ ಹುದ್ದೆಯಾದ ಪ್ರೌಢ ಶಾಲಾ ಚಿತ್ರಕಲಾ ಶಿಕ್ಷಕರು, ಸರ್ಕಾರಿ ಚಿತ್ರಕಲಾ ಶಾಲೆ, ಧಾರವಾಡ, ಇಲ್ಲಿಗೆ ಹಿಂದಿರುಗಿಸಿ ಆದೇಶಿಸಿದೆ.

ಕರ್ನಾಟಕದ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಎಂ.ಎ. ಅಹಮದ್ ಜಾನ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-2)

ಇವರಿಗೆ:-

1. ಮಹಾಲೇಖಪಾಲರು, (ಲೆಕ್ಕಪತ್ರ/ಆಡಿಟ್), ಕರ್ನಾಟಕ, ಬೆಂಗಳೂರು-560001.

2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳುರು
3. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳುರು
4. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಪ್ರಾಂಶುಪಾಲರು, ಧಾರವಾಡ ಚಿತ್ರಕಲಾ ಮಹಾವಿದ್ಯಾಲಯ, ಧಾರವಾಡ.
7. ಮಾನ್ಯ ಉನ್ನತ ಶಿಕ್ಷಣ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-8, ವಿಧಾನಸೌಧ.
11. ಶ್ರೀ ಪಿ.ಆರ್ ಬಡಿಗೇರ, ಸಹಾಯಕ ನಿರ್ದೇಶಕರು (ಚಿತ್ರಕಲಾ ಘಟಕ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ.
13. ಆಂತರಿಕ ಆರ್ಥಿಕ ಸಲಹೆಗಾರರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ.
14. ರಕ್ಷಣಾ ಕಡತ/ಹೆಚ್ಚುವರಿ ಪ್ರತಿ.